**Q.P. Code – 32204**

# Second Semester B.Sc./B.C.A. Degree Examination, April/May 2019

*(CBCS – Semester Scheme)*

**ಕನ್ನಡ ಭಾಷೆ**

## Paper II – ಕಾವ್ಯಕಿರಣ – ೨, ಆಧುನಿಕ ಕನ್ನಡ ಕವಿತೆಗಳು ಮತ್ತು ಆಯ್ದ ಸಣ್ಣ ಕಥೆಗಳು

*Time : 3 Hours]* *[Max. Marks : 90*

ಭಾಗ – 1

(ಆಧುನಿಕ ಕನ್ನಡ ಕವಿತೆಗಳು)

I. (ಅ) **ಒಂದು** ಪದ್ಯದ ವಿಶೇಷವನ್ನು ವಿವರಿಸಿ : **(1 × 6 = 6)**

1. ಗೆರೆ ದಾಟಬಾರದ ನಾನು ಕಾಯುತ್ತಿದ್ದೇನೆ
ಉರಿವ ಸೌದೆಗಳ ಜೊತೆಗೆ
ಪಾತ್ರೆಗಳಲ್ಲಿ ಕೊತಕೊತ ಕುದಿದು
ಕಾಯುತ್ತಿದ್ದೇನೆ.

2. ಈ ಶರೀರ ನೋವಿನ ಚಿತ್ರ
ಧಮನಿ ಧಮನಿಗಳಲ್ಲಿ
ತುಂಬಿದೆ ತಿರಸ್ಕಾರದ ಬೆಂಕಿ
ಹಸಿವನುಂಡಿರುವೆ
ಬತ್ತಲೆಯನುಟ್ಟಿರುವೆ
ಇಲ್ಲ ನಿಮ್ಮ ಪದಕೋಶದಲಿ
ಇದಕ್ಕಾಗಿ ಒಂದು ಶಬ್ದ

(ಆ) **ಮೂರನ್ನು** ಸಂದರ್ಭ ಸಹಿತ ವಿವರಿಸಿ : **(3 × 3 = 9)**

1. ಎದೆಯ ದನಿ ಧರ್ಮ ನಿಧಿ! ಕರ್ತವ್ಯವದುವೆ ವಿಧಿ!
2. ಬುದ್ಧನ ಸಮಾಧಿಯದು ಮಾನವನ ಹೃದಯ
3. ಅದೆಲ್ಲೊ ದೂರ ಗುಡಿ ಗೋಪುರ ಇಲ್ಲಿ ಇಷ್ಟು ಹತ್ತಿರ ಅದರ ಸರದಾರ
4. ಹಂಚಿ ಉಟ್ಟುಣ್ಣುವ ಸುಖದ ನಿಜ ತಿಳಿಯಬೇಕಿದೆ ಮನುಜ!

(ಇ) **ಎರಡು** ವಿಷಯಗಳಿಗೆ ಟಿಪ್ಪಣಿ ಬರೆಯಿರಿ : **(2 × 5 = 10)**

1. ಜಿ.ಎಸ್. ಶಿವರುದ್ರಪ್ಪ
2. ಮಹಿಳಾ ಸಂವೇದನೆ
3. ಸಿದ್ಧಲಿಂಗಯ್ಯ

(ಈ) ಒಂದು ವಾಕ್ಯದಲ್ಲಿ ಉತ್ತರಿಸಿ : **(5 × 1 = 5)**

1. ಕನ್ನಡದ ಕಣ್ವ ಎನಿಸಿಕೊಂಡ ಕವಿ ಯಾರು?
2. 'ಕಟ್ಟುವೆವು ನಾವು' ಕವಿತೆಯನ್ನು ಯಾರು ಬರೆದಿದ್ದಾರೆ?
3. 'ನಿತ್ಯೋತ್ಸವದ ಕವಿ' ಎಂದು ಯಾರನ್ನು ಕರೆಯುತ್ತಾರೆ?
4. ಹಾದಿ ಬೀದಿಯ ಸೂರ್ಯನಂತೆ ಬೆಳಗಿದವರು ಯಾರು?
5. 'ಅವರು ಮತ್ತು ನಾವು' ಇದು ಯಾರ ಕವಿತೆ?

II. **ಎರಡು** ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ : **(2 × 10 = 20)**

1. ಅಸ್ಪೃಶ್ಯತೆಯ ನೋವನ್ನು 'ನಾನೊಂದು ಮರವಾಗಿದ್ದರೆ' ಕವಿತೆಯು ಹೇಗೆ ಅಭಿವ್ಯಕ್ತಿಸಿದೆ?
2. ಮುಸ್ಲಿಮರ ಪರಕೀಯತೆಯ ಪ್ರಜ್ಞೆಯನ್ನು 'ನಿಮ್ಮೊಡನಿದ್ದೂ ನಿಮ್ಮಂತಾಗದೆ' ಕವಿತೆಯ ಮೂಲಕ ವಿಶ್ಲೇಷಿಸಿ.
3. 'ಅವರು ಮತ್ತು ನಾವು' ಕವಿತೆಯು ಏನನ್ನು ಧ್ವನಿಸುತ್ತದೆ? ವಿವರಿಸಿ.

ಭಾಗ – 2

(ಆಯ್ದ ಸಣ್ಣ ಕಥೆಗಳು)

III. (ಅ) **ಒಂದರ** ಸ್ವಾರಸ್ಯವನ್ನು ಬರೆಯಿರಿ : **(1 × 5 = 5)**

1. "ಸುಮ್ಮನೆ ಮೇಸ್ಟ್ರೀಟ್ ಅಂದ್ರೆ ಏನಾಯ್ತಪ್ಪ ತಪ್ಪಿಗೆ ಶಿಕ್ಷೆ ಮಾಡುವುದು, ಸತ್ಯವಂತ್ನ ಕಾಪಾಡೋದು, ದೇವರ ಕೆಲ್ಸ. ಆ ಕೆಲ್ಸ ಮನುಷ್ಯನ ಕೈಗೆ ಬಂದಾಗ ಮನುಷ್ಯ ದೇವರ ಹಾಗೆ ನಡಕೋಬೇಕು. ಹೆಚ್ಚು ಕಡಿಮೆ ಆದೀತು ಅಂತ ಭಯದಲ್ಲಿರಬೇಕು. ಇಲ್ದೀರಾ ಇದ್ರೆ ಆ ಮೇಸ್ಟ್ರೀಟ್ರು ಬೇಡಿ ಹಾಕತೇನುದರಲ್ಲಾ ಹಂಗೆ ಅನ್ಯಾಯ ಆದಾತು.

2. "ಯಾರೂ ಕಾಣಿಸದ ಆ ರಟ್ಟಿನ ಸೆಟ್ಟಿನ ಮರೆಯಲ್ಲಿ ಕರೆಗಾಗಿ ವಿಚಿತ್ರ ನೀರವದಲ್ಲಿ ನಿಂತ ಮಧು ಬನಿ ಮೆಲ್ಲಗೆ ತನ್ನ ಪರ್ಸಿನಿಂದ ಆ ಪುಟ್ಟ ಟಿಶ್ಯು ಕಾಗದದ ದೋಣಿಯನ್ನು ಹೊರ ತೆಗೆದಳು". ಅದನ್ನು ಅಂಗೈಲಿಟ್ಟು ನೋಡುತ್ತಾ ಮೆಲ್ಲಗೆ ಕಣ್ಮುಚ್ಚಿ "ದೇವರೇ ಕರೀನಾ ಬರಲಿ" ಎಂದು ಆಳವಾಗಿ ಪ್ರಾರ್ಥಿಸಿದಳು ಅಂಗೈಲಿದ್ದ ಆ ಸಣ್ಣ ದೋಣಿ ಇಡೀ ಜಗದ ಭಾರವನ್ನು ಹೂವಿನಂತೆ ಹೊತ್ತು ಕೊಂಡು ಬೆಳದಿಂಗಳಲ್ಲಿ ಚಲಿಸ ತೊಡಗಿತು.

(ಆ) **ಮೂರನ್ನು** ಸಂದರ್ಭ ಸಹಿತ ವಿವರಿಸಿ : **(3 × 2 = 6)**

1. "ಪರ್ವಾಯಿಲ್ಲ ಪದ ಹೇಳ್ತಾನೆ ಅಂತ ಮನೆಹತ್ರ ಬಿಟ್ರೆ ಕೋಳಿ ಹಾರ್ಸೋಕೆ ಮೊದಲು ಮಾಡಿದ".
2. "ಕಮುನಿಸಮು ಬರ್ಬೇಕು, ಆಗ ನೀ ನಗೋದು ಹೋಗ್ಬೇಕು".
3. ಹುಚ್ಚು ಹುಡುಗಿ ನಮ್ಮದಾವ ಚಂದ್ರ ವಂಶ. ಸೂರ್ಯ ವಂಶ?"
4. ಅದೇ ಆ ಮರಿ ಹುಲಿ ಮಾಡಿತ್ತಲ್ಲ ಆ ಹೈದ ಯಾರ್ದ".

(ಇ) **ಒಂದು** ವಿಷಯಕ್ಕೆ ಟಿಪ್ಪಣಿ ಬರೆಯಿರಿ : **(1 × 4 = 4)**

1. ಜೋಗಿ ವೃತ್ತಿ
2. ಗೋಪಣ್ಣ ಮಾಸ್ತರು

(ಈ) ಒಂದು ವಾಕ್ಯದಲ್ಲಿ ಉತ್ತರಿಸಿ : **(5 × 1 = 5)**

1. ಅಂಜಪ್ಪ ಯಾವ ಕಾರಣಕ್ಕಾಗಿ ವಿಚಾರಣೆಗೆ ಒಳಗಾಗುತ್ತಾನೆ?
2. ಕರಿನಾಗರ ಕತೆಯ ಲೇಖಕರು ಯಾರು?
3. ಟಿಕ್ ಟಿಕ್ ಗೆಳೆಯ ಕತೆಯಲ್ಲಿ ಬರುವ ಆಸ್ಪತ್ರೆಯ ಹೆಸರೇನು?
4. ಗೋಪಣ್ಣ ಮಾಸ್ತರರ ಗೆಳೆಯನ ಹೆಸರೇನು?
5. ತಬರ ಸೆಟ್ಟಿಯ ಊರು ಯಾವುದು?

IV. **ಎರಡು** ಪ್ರಶ್ನೆಗಳಿಗೆ ಉತ್ತರಿಸಿ : **(2 × 10 = 20)**

1. ವ್ಯವಸ್ಥೆಯ ಕುರಿತಾದ ವ್ಯಂಗ್ಯ 'ತಬರನ ಕತೆ'ಯಲ್ಲಿ ಹೇಗೆ ವ್ಯಕ್ತವಾಗಿದೆ?
2. ಆಧುನಿಕತೆಯಿಂದ ಬದುಕಿನಲ್ಲಿ ಉಂಟಾದ ಪಲ್ಲಟಗಳನ್ನು 'ಯುಗಾದಿ' ಕತೆ ಹೇಗೆ ಚಿತ್ರಿಸಿದೆ?
3. 'ಹೊಸ ಹುಟ್ಟು ಕತೆಯಲ್ಲಿ ತಾಯ್ತನದ ಕುರಿತು ಹೊಸ ಪ್ರಜ್ಞೆ ಹೇಗೆ ಅಭಿವ್ಯಕ್ತಗೊಂಡಿದೆ?